<u>**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**</u>

ಓಎಸ್.48–12

ಪಿ.ಡಬ್ಲ್ಯೂ.1

ಹೆಸರು ಃ ಶ್ರೀರಾಮ್

ಪ್ರಮಾಣೀಕೃತ ದಿನಾಂಕಃ– 21.07.2018

**ಮುಂದುವರೆದ ಪಾಟೀ ಸವಾಲು: 3ನೇ ಪ್ರತಿವಾದಿ ಪರ ವಕೀಲರಿಂದಃ–**

ನಮ್ಮ ಅಜ್ಜಿಯ ಗಂಡನ ಹೆಸರು ಮುನಿತಾಯಪ್ಪ.3ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಮುತ್ಯಾಲಮ್ಮನ ಗಂಡನ ಹೆಸರು ಮುತ್ಯಾಲಪ್ಪ ಎಂದರೆ ಸರಿಯಲ್ಲ. ಮುತ್ಯಾಲಮ್ಮನಿಗೆ ಒಟ್ಟು 6 ಸ್ವತ್ತುಗಳು ಗ್ರಾಂಟ್ ಆಗಿದ್ದವು ಎಂದರೆ ಸರಿ. ನಮ್ಮ ಅಜ್ಜಿಗೂ ಸಹ 6 ಸ್ವತ್ತುಗಳು ಮಂಜೂರು ಆಗಿದ್ದವು. ಅವುಗಳೆಂದರೆ ಸರ್ವೆ ನಂ. 77,147,30,70, ಮತ್ತು 23ರ ಸ್ವತ್ತುಗಳು ಆಗಿರುತ್ತದೆ. ಅವುಗಳ ವಿಸ್ತೀರ್ಣ ಹೇಳಲಾಗುವುದಿಲ್ಲ. ಅದೇ ರೀತಿ ಅವುಗಳಲ್ಲಿ ಯಾರ್‍ಯಾರ ಭಾಗಕ್ಕೆ ಎಷ್ಟು ವಿಸ್ತೀರ್ಣ ಹೋಗಿದೆ ಎಂದು ಹೇಳಲಾಗುವುದಿಲ್ಲ. ಸರ್ವೆ 77,147,30, ಮತ್ತು 43 ದೊಡ್ಡೂರು ಅಮಾನಿಕೆರೆ ಸರ್ವೆ ನಂ. 23,ಮತ್ತು 70 ತಳವಾರಿ ಇನಾಮತಿ ಜಮೀತಿ ಎಂದರೆ ಸರಿ.

ಸದರಿ ಸ್ವತ್ತುಗಳಿಗೆ 6 ಜನ ಹಕ್ಕುದಾರರು ಇದ್ದರು ಎಂದರೆ ಸರಿಯಲ್ಲ. ಸದರಿ ಜಮೀನುಗಳಿಗೆ ಗಂಗಾ , ರೇಖಾ , ಮುನಿಗಾ, ಗುಳ್ಳ ಮುನಿಗಾ ಮತ್ತು ಮುತ್ತ ಎಂಬುವವರು ಮೂಲ ಹಕ್ಕುದಾರರು ಎಂದರೆ ಸರಿ. ಪ್ರಕರಣ ಸಂಖ್ಯೆ 44–81,82 ರಂತೆ ಇವರುಗಳಿಗೆ ಮಂಜೂರಾಗಿದೆ ಎಂದರೆ ಸರಿ. ಮುತ್ಯಾಲಮ್ಮ ಕೋಂ ಮುತ್ಯಾಲಪ್ಪ ಎಂಬುವವರಿಗೆ ಸರ್ವೆ ನಂ. 3. 1/4 ಗುಂಟೆ ಮಂಜೂರಾಗಿತ್ತು ಎಂದರೆ ಸರಿ. ಅದೇ ರೀತಿ ಇತರೆ ಸರ್ವೆ ನಂ.ಗಳು ಮಂಜೂರಾಗಿತ್ತು ಎಂದರೆ ಸರಿ. ಆ ರೀತಿ ಮಂಜೂರಾದ ಸ್ವತ್ತನ್ನು 3ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಖರೀದಿಸಿದ್ದಾರೆ ಎಂದು ಹೇಳಿರುತ್ತಾರೆ. ಈ ರೀತಿ ಮಂಜೂರಾದ ನಂತರ ಅವರ ಹೆಸರಿಗೆ ರೆವಿನ್ಯೂ ದಾಖಲೆಗಳು ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ನಿಪಿ. 6 ರಿಂದ 8 ರಲ್ಲಿ ಮುತ್ಯಾಲಮ್ಮನ ಹೆಸರಿಗೆ ನಮೂದಾಗಿದೆ ಎಂದರೆ ಸಾಕ್ಷಿ ಅವುಗಳನ್ನು ಸೃಷ್ಟಿ ಮಾಡಿಕೊಂಡಿರುವುದು ಎಂದು ಹೇಳಿರುತ್ತಾರೆ.

ಈ ರೀತಿ ಅವರ ಹೆಸರಿಗೆ ಖಾತೆ ನಮೂದಾದ ನಂತರ ಮುತ್ಯಾಲಮ್ಮ ಮತ್ತು ಅವರ ಮಗ 3ನೇ ಪ್ರತಿವಾದಿಗೆ ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1997 ರಿಂದ 3ನೇ ಪ್ರತಿವಾದಿ ಹೆಸರಿಗೆ ಖಾತೆ ಪಹಣಿಗಳು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅರ್.ಆರ್.ಟಿ ಸಂಖ್ಯೆ : 48ರಲ್ಲಿ 23 ಗುಂಟೆ ಬಿಡಿಸಿಕೊಡುವಂತೆ ಕೋರಿರುತ್ತೇನೆ.

ಸದರಿ ಸ್ವತ್ತು ಮುತ್ಯಾಲಮ್ಮನಿಗೆ ಮಂಜೂರಾಗಿದ್ದು, ನಮ್ಮ ಅಜ್ಜಿಗಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಬಾಸ್ಕರ್ ರೆಡ್ಡಿ ರವರಿಗೆ ಜಿ.ಪಿ.ಎ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಸುಳ್ಳು ಅರ್ಜಿ ನೀಡಿ ನಮ್ಮ ಅಜ್ಜಿ ಮುತ್ಯಾಲಮ್ಮ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ವಿಸ್ತಿರ್ಣ 31 ಗುಂಟೆ ಎಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಇನ್ನೊಂದು ದಾವೆ ಇರುತ್ತದೆ. ಸದರಿ ದಾವೆ ನಮ್ಮ ತಂದೆಯವರು ಹೂಡಿರುತ್ತಾರೆ. ಸದರಿ ದಾವೆಯಲ್ಲಿ ನಾನು ಸಹ ಪಕ್ಷದಾರನಾಗಿರುತ್ತೇನೆ. ಉಳಿದ ಸ್ವತ್ತು ಬಾಸ್ಕರ್ ರೆಡ್ಡಿರವರ ಹೆಸರಿನಲ್ಲಿದ್ದೆ ಎಂದರೆ ಸರಿಯಲ್ಲ. ಈಗ ಸುಮಾರು 4–5 ವರ್ಷಗಳ ಹಿಂದೆ ಅದನ್ನು ಜರ್ನಾಧನ ರೆಡ್ಡಿರವರಿಗೆ ಮಾರಾಟಮಾಡಿರುತ್ತೇವೆ. ಉಳಿದ 4 ಸ್ವತ್ತುಗಳು ಬೋಗಸ್ ಮಾಡಿಕೊಂಡಿರುವುದು, ಅದು ಯಾರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅವುಗಳ ಸಂಬಂಧಪಟ್ಟಂತೆ ಸಹ ದಾವಾ ಸಂಖ್ಯೆ ಮಿ.ಸ್. 1–13 ರಂತೆ ದಾವೆ ಹೂಡಿರುತ್ತೇನೆ.

ಸದರಿ ದಾವೆಯನ್ನು ಸರ್ವೆ ನಂ. 77 ಕ್ಕೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ಉಳಿದ 3 ಸ್ವತ್ತುಗಳ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹುಡುಕುತ್ತಿದ್ದೇನೆ. ದಾವಾ ಸ್ವತ್ತಿಗೂ ನನಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುವ ಬಗ್ಗೆ ನಾನು ರೆವಿನ್ಯೂ ಅಧೀಕಾರಿಗಳ ಮುಂದೆ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. 2ನೇ ಪ್ರತಿವಾದಿ ಆದ ಮುತ್ಯಾಲಪ್ಪ ರವರು ಮೃತಪಟ್ಟಿರುತ್ತಾನೆ. 1 ಮತ್ತು 2ನೇ ಪ್ರತಿವಾದಿಗಳಿಗೆ ಪೂಜಪ್ಪ, ಮತ್ತು ನಾರಾಯಣಸ್ವಾಮಿ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿಗೆ ಹೆಣ್ಣು ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು: ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**